International Journal of Kannada Research
www.kannadajournal.com

ISSN: 2454–5813
IJKR 2019; 5(4): 164-166
© 2019 IJKR
www.kannadajournal.com
Received: 26-08-2019
Accepted: 30-09-2019

**ಪ್ರಕಾಶ್ ಎನ್**
ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಶ್ರೀರಂಗಪಟ್ಟಣ, ಕರ್ನಾಟಕ, ಭಾರತ

**Correspondence**
**ಪ್ರಕಾಶ್ ಎನ್**
ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಶ್ರೀರಂಗಪಟ್ಟಣ, ಕರ್ನಾಟಕ, ಭಾರತ

# ಮಂಡ್ಯ ಪ್ರದೇಶದ ಶಾಸನೋಕ್ತ ಕಂತಿಯರು

**ಪ್ರಕಾಶ್ ಎನ್**

ಕರ್ನಾಟಕವನ್ನು ಹಲವು ರಾಜಮನೆತನಗಳು ಆಳ್ವಿಕೆ ಮಾಡಿರುವುದನ್ನು ಕಾಣಬಹುದು. ಈ ರಾಜಮನೆತನಗಳು ಬೌದ್ಧಧರ್ಮ, ಜೈನಧರ್ಮ, ವೈದಿಕ ಧರ್ಮಗಳಿಗೆ ರಾಜಾಶ್ರಯವನ್ನು ನೀಡಿ ಪ್ರೋತ್ಸಾಹಿಸಿದರು. ಮಂಡ್ಯ ಪ್ರದೇಶದಲ್ಲಿಗಂಗರು ಮತ್ತು ಹೊಯ್ಸಳರು ಜೈನಧರ್ಮಕ್ಕೆ ರಾಜಾಶ್ರಯವನ್ನು ನೀಡಿ ಪ್ರೋತ್ಸಾಹಿಸಿದರು. ಇದಕ್ಕೆ ಕಾರಣವೆಂದರೆ ಈ ಮನೆತನಗಳಿಗೆ ಜೈನಧರ್ಮದ ಬಗ್ಗೆ ಒಲವಿದ್ದದ್ದು. ಪಾರ್ಶ್ವನಾಥ ಮತ್ತು ಮಹಾವೀರ ಬೋಧಿಸಿದ ಧರ್ಮವೇ ಜೈನಧರ್ಮ. ಜೈನ ಪರಂಪರೆಯಂತೆ ಜೈನಧರ್ಮವು ವೃಷಭದೇವನಿಂದ ಆರಂಭವಾಯಿತು. ಪಾರ್ಶ್ವನಾಥ ಮಹಾವೀರನ ಕಾಲದಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿತು.

ಕರ್ನಾಟಕದಲ್ಲಿ ಜೈನಧರ್ಮ ಭದ್ರಬಾಹುಮುನಿಗಳ ಆಗಮದೊಂದಿಗೆ ಆರಂಭವಾಯಿತೆಂಬುದು ಪ್ರಚಲಿತವಾದ ವಿಷಯ. ಆದರೆ ಭದ್ರಬಾಹು ಮುನಿಗಳು ಆಗಮಿಸುವ ಪೂರ್ವದಲ್ಲಿಯೇ ಜೈನಧರ್ಮ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿತ್ತು ಎಂಬುದಾಗಿ ಪಿ.ಬಿ.ದೇಸಾಯ್‌ರವರು ಅಭಿಪ್ರಾಯಪಟ್ಟಿದ್ದಾರೆ. ಕಾರಣ ಭದ್ರಬಾಹು ಮುನಿ ಮತ್ತು ಅವರ 12000 ಶಿಷ್ಯರ ತಂಡ ಆಗಮಿಸಿದಾಗ ಅವರಿಗೆ ಬೇಕಾದ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವಂತಹ ಜೈನಧರ್ಮಿಯರು ಇದ್ದ ಕಾರಣದಿಂದಲೇ, ಭದ್ರಬಾಹು ಮುನಿಗಳು ಆಗಮಿಸಲು ಸಾಧ್ಯವಿದೆ ಎಂದಿದ್ದಾರೆ.

ಜೈನಧರ್ಮವು ಅಹಿಂಸಾ ತಳಹದಿಯ ಮೇಲೆ ಸ್ಥಾಪಿತವಾಗಿದೆ. ಜೈನಧರ್ಮವು ಸ್ತ್ರೀ ಮತ್ತು ಪುರುಷರು ಇಬ್ಬರನ್ನು ಸಮನಾಗಿ ಸ್ವೀಕರಿಸಿದ ಧರ್ಮವಾಗಿದೆ. ಸ್ತ್ರೀಮುಕ್ತಿಯನ್ನು ಒಪ್ಪಿಕೊಂಡ ಜೈನ ಸಿದ್ಧಾಂತ ನಂತರದ ದಿನಗಳಲ್ಲಿ ವಿಭಜನೆ ಹೊಂದಿತು. ಭಗವಾನ್ ಮಹಾವೀರನು ಜೈನ ಮತ ಮತ್ತು ಜ್ಞಾನವು ಜನಸಾಮಾನ್ಯರಿಗೆ ಮುಟ್ಟಿಸುವುದಕ್ಕಾಗಿ ಸಂಘದ ಯೋಜನೆಯನ್ನು ಮಾಡಿದನು. ಅದಕ್ಕೆ ಜೈನಸಂಘವೆಂದು ಹೆಸರು. ಇದು ಮುನಿ ಆರ್ಯಿಕಾ ಮತ್ತು ಶ್ರಾವಕ–ಶ್ರಾವಕಿಯಕಿಂದ ಕೂಡಿದಾಗಿತ್ತು. ಇವರುಗಳೆಂದರೆ ಸನ್ಯಾಸಜೀವನ ನಡೆಸುವ ಮುನಿ ಆರ್ಯಿಕೆಯರು– ಗೃಹಸ್ಥ ಜೀವನ ನಡೆಸುವ ಶ್ರಾವಕ–ಶ್ರಾವಕಿಯರು. ಕಾಲಾನಂತರದಲ್ಲಿ ಶ್ವೇತಾಂಬರರು ಮತ್ತು ಯಾಪನೀಯರು ಸ್ತ್ರೀ ಪಾರಮ್ಯವನ್ನು ಒಪ್ಪಿದರೆ, ದಿಗಂಬರು ಪಂಥದವರು ಸ್ತ್ರೀಗೆ ಮುಕ್ತಿ ನಿರಾಕರಿಸಿದರು.

ಜೈನಧರ್ಮದಲ್ಲಿ ಸನ್ಯಾಸಿಯರನ್ನು "ಕಂತಿಯರು"ಎಂದು ಕರೆಯುತ್ತಾರೆ. ಇವರು ಲೋಯ ಎಂದರೆ ಕೇಶವಿಚ್ಛೆದನವನ್ನು ಮಾಡಿಸಿಕೊಳ್ಳಬೇಕಿತ್ತು. ಬಿಳಿಯ ಬಟ್ಟೆಯನ್ನು ಧರಿಸಬೇಕಾಗಿತ್ತು. ಹಾಗೆಯೆ ಬಟ್ಟೆಯನ್ನು ಬಿಸಿಲಿನಲ್ಲಿ ಒಣಗಿಸಬಹುದಾಗಿತ್ತು. ಆದರೆ ನೀರಿನಲ್ಲಿ ಹಾಕಿ ಶುಚಿಗೊಳಸಕೊಡದೆಂಬ ನಿಯಮಗಳಿದ್ದವು.

ಕಂತಿ ಎಂಬ ಪದವು ತಮಿಳು ಭಾಷೆಯಲ್ಲಿ ನಕವತ್ನಿ ಎಂಬ ಪದದ ರೂಪಾಂತರವಾಗಿದೆ. ಬಿಳಿಯ ಬಟ್ಟೆಯ ಮೇಲೆ ಕೌದಿಯನ್ನು ಧರಿಸುತ್ತಿದ್ದರಿಂದ ಆರ್ಯಕೆಯರನ್ನು ಕವಂತಿ ಎನ್ನುತ್ತಿದ್ದರು. ಶ್ರಮಣಿಯರಾಗಿ ರತ್ನತ್ರಯವನ್ನು ಸಾಧಿಸಿ, ಬಾಳಿನ ನಶ್ವರತೆಯ ಅರಿವಾದಾಗ ಸನ್ಯಾಸನ ಸ್ವೀಕರಿಸಿದ ಸ್ತ್ರೀಯರು ಕಂತಿಯರೆನಿಸಿದರು. ಕಂತಿಯರನ್ನು ಸಾಮಾನ್ಯವಾಗಿ ಅವ್ವ, ಅಬ್ಬ, ಅಬ್ಬಾಜಿ, ಖನ್ತಿ, ಶಿಷ್ಯೆ, ಶಿಷ್ಯಂತಿನಿ, ಆರ್ಯಕೆ, ಅಜಿಕೆ, ಸಿಸಿತಿ, ಆರ್ಯಕೆ, ಗೊರವಿ, ಕಳವಿ(ಮುದುಕಿ)ಎಂದು ಕರೆಯುವ ಪದ್ಧತಿಯಿದ್ದುದನ್ನು ಕಾಣುತ್ತೇವೆ.

ಕಂತಿಯರ ಪ್ರಥಮ ಉಲ್ಲೇಖ ದೊರೆಯುವುದು ವೃಷಭನಾಥನ ಹೆಣ್ಣು ಮಕ್ಕಳಾದ ಬ್ರಾಹ್ಮಿ ಮತ್ತು ಸುಂದರಿಯರು. ವೃಷಭನಾಥನು ಸಂಸಾರತ್ಯಾಗ ನಿಶ್ಚಯ ಮಾಡಿದ ಪರ್ವದಿನದಂದು ಆ ಮಹಾದೇವನನ್ನು ಕಂಡು ಮೊದಲು ವಂದಿಸಿದವರು ಅವಳಿ ಖಡ್ಗಗಳಂತೆ ಮಿಂಚುತ್ತಿದ್ದ, ಸರ್ವಾಂಗ ಸುಂದರಿಯರಾದ ಬ್ರಾಹ್ಮಿ ಮತ್ತು ಸುಂದರಿಯರು. ತಂದೆ ಹೆಣ್ಣು ಮಕ್ಕಳನ್ನು ತಬ್ಬಿಕೊಂಡು

ಅರ್ಧಾಸನದಲ್ಲಿ ಕುಳ್ಳಿರಿಸಿಕೊಂಡಾಗ ಅವರು ಸಂಸಾರ ತ್ಯಾಗ ಮಾಡಿ ಸನ್ಯಾಸಿನಿಯರಾಗಿ ಲೋಕಹಿತದಲ್ಲಿ ಮಗ್ನರಾದರು.

ಮಹಾವೀರನ ಕಾಲದಲ್ಲಿ ಶ್ರಮಣ ಸಂಘದಲ್ಲಿ ಸ್ತ್ರೀಯರಿಗೆ ಪ್ರವೇಶವನ್ನು ಕಲ್ಪಿಸಲಾಯಿತು. ಗರ್ಭವತಿಯರಲ್ಲದ ಯಾವ ಹೆಂಗಸು ಬೇಕಾದರು ಸ್ವಇಚ್ಛೇಯಿಂದ ಆರ್ಯಿಕೆ–ಯಾಗಬಹುದಿತ್ತು. ಇವರ ಕಾಲದಲ್ಲಿ 14000 ಶ್ರಮಣರಿದ್ದರೆ, 36000 ಆರ್ಯಿಕೆಯರಿದ್ದರು. ಮಹಿಳೆಯರು ಜೀವನದಲ್ಲಿ ಜಿಗುಪ್ಸೆ ಉಂಟಾದಾಗ ಸಂಸಾರ ಭೋಗಗಳಲ್ಲಿನ ವೈರಾಗ್ಯಹೊಂದಿ ಆತ್ಮಕಲ್ಯಾಣ ಮಾಡಿಕೊಳ್ಳುವ ಉದ್ದೇಶದಿಂದ ಸರ್ವಸ್ವಗಳನ್ನು ತೊರೆದು ಮೌನವ್ರತ ಆಚರಿಸುವವರೆ ಕಂತಿಯರು. ಶಾಸನಗಳಲ್ಲಿ ಉನ್ನತ ವರ್ಗದ ಮಹಿಳೆಯರಿಂದ ಸಾಮಾನ್ಯ ವರ್ಗದ ಮಹಿಳೆಯರವರಿಗೆಕಂತಿಯರಾಗಿರುವುದಕ್ಕೆ ಉದಾಹರಣೆಗಳು ಸಿಗುತ್ತವೆ.ಕಂತಿಯರು ಪೂರ್ವಾಶ್ರಮದ ಭಾವನೆಗಳನ್ನು ತ್ಯಜಿಸಿ ಆಧ್ಯಾತ್ಮಿಕ ಪರಿಪಕ್ವತೆಯನ್ನು ಪಡೆದುಅಂತರಂಗ ಹಾಗೂ ಬಹಿರಂಗ ಶುಚಿತ್ವವನ್ನು ಪಡೆದುಕೊಳ್ಳುತ್ತಿದ್ದರು. ಕಂತಿಯರು 2ಮೂಲಗುಣಗಳು, 5ಮಹಾವ್ರತಗಳು, 5ಇಂದ್ರಿಯಗಳು, 6 ಅವಶ್ಯಕ ಕ್ರಿಯೆಗಳು, 7 ಮಿಕ್ಕ ಕ್ರಿಯೆಗಳು ಸೇರಿ 28 ಮೂಲಗುಣಗಳನ್ನು ಪಾಲಿಸಬೇಕಿತ್ತು. ಈ ಪಾಲನೆಯ ಮೂಲಕ ಶಕ್ತಿ,ಮುಕ್ತಿಎರಡನ್ನು ಪಡೆಯುತ್ತಿದ್ದರು.

ಮಂಡ್ಯ ಜಿಲ್ಲೆಯು ಜೈನಧರ್ಮಿಯರ ಪವಿತ್ರಕ್ಷೇತ್ರವಾದ ಶ್ರವಣಬೆಳಗೊಳಕ್ಕೆ ಹೊಂದಿಕೊಂಡಿರುವಂತಹ ಪ್ರದೇಶವಾಗಿದೆ. ಮಂಡ್ಯ ಜಿಲ್ಲೆಯ ಅರೆತಿಪ್ಪೂರು, ಶ್ರವಣಬೆಳಗೊಳಕ್ಕೆ ಪೂರ್ವದಲ್ಲಿಯೇ ಜೈನಕ್ಷೇತ್ರವಾಗಿದ್ದು, ಇಲ್ಲಿಯ ಬಾಹುಬಲಿಯ ಮೂರ್ತಿಯು ಶ್ರವಣಬೆಳಗೊಳದ ಗೊಮ್ಮಟ ಮೂರ್ತಿಯ ಕೆತ್ತನೆಯ ಮೇಲೆ ಪ್ರಭಾವ ಬೀರಿದೆ. ಅರೆತಿಪ್ಪೂರು, ಕಂಬದಹಳ್ಳಿ, ಕಳಸ್ತವಾಡಿಗಳು ಜೈನಧರ್ಮಿಯರ ಪವಿತ್ರ ತೀರ್ಥಕ್ಷೇತ್ರಗಳಾಗಿದ್ದವೆಂಬುದನ್ನು ತಿಳಿಯಬಹುದು. ಮಂಡ್ಯ ಜಿಲ್ಲೆಯ ಜೈನ ಶಾಸನಗಳನ್ನು ಅಧ್ಯಯನ ಮಾಡಿದಾಗ ಜೈನಕಂತಿಯರ ಹೆಸರು ಉಲ್ಲೇಖಗೊಂಡಿರುವುದನ್ನು ಕಾಣಬಹುದಾಗಿದೆ. ಅಂತಹ ಕಂತಿಯರುಗಳೆಂದರೆ, ಬಿಂಡಿಗ ನವಿಲೆಯ ಶಾಸನವು ಕ್ರಿ.ಶ.975ರ ಕಾಲಕ್ಕೆ ಸೇರಿದ್ದಾಗಿದ್ದು, ಈ ಶಾಸನದಲ್ಲಿ ಅಮೃತಬ್ಬೆಯ ಉಲ್ಲೇಖವಿದ್ದು, ಈಕೆ ಬಿಂಡಿಗನವಿಲೆ ಗ್ರಾಮದಲ್ಲಿ ವಾಸಿಸುತ್ತಿದ್ದಳು. ಅಮೃತಬ್ಬೆಯು ಏಕಪಾರ್ಶ್ವಶಯನ ಎಂಬ ವಿಶಿಷ್ಟವಾದ ವ್ರತಮಾಡಿ ಕಡೆಯಲ್ಲಿ ಪ್ರಪಂಚತ್ಯಾಗ ಮಾಡುವ ಸಂಕಲ್ಪಮಾಡಿ ಹಾಗೆಯೇ ಎಲ್ಲರೂ ಒಪ್ಪಿಗೆ ಪಡೆದು ಸಮಾಧಿಮರಣ ಹೊಂದಿದಿದ್ದುಈ ಶಾಸನದಲ್ಲಿ ತಿಳಿದುಬರುತ್ತದೆ. ಈ ಶಾಸನದಉಲ್ಲೇಖದ ಪ್ರಕಾರ ಅಮೃತಬ್ಬೆಕಂತಿಯು ಮೊದಲು ಸಂಸಾರ ಜೀವನದಲ್ಲಿದ್ದು, ನಂತರ ಸಂಸಾರಜೀವನ ತ್ಯಜಿಸಿ ಕುಟುಂಬದ ಒಪ್ಪಿಗೆ ಪಡೆದು ಸನ್ಯಾಸನವನ್ನು ಸ್ವೀಕರಿಸಿ, ವ್ರತವನ್ನು ಕೈಗೊಂಡು ಕಂತಿಯಾಗಿ ಸಮಾಧಿ ಮರಣ ಹೊಂದಿದ ವಿಷಯವನ್ನು ಹಾಗೂ ಈಕೆಯ ಮಕ್ಕಳು ನೆನಪಿಗಾಗಿ ನಿಸಧಿ ಹಾಕಿಸಿರುವುದನ್ನು ಕಾಣಬಹುದು. ಬಿಂಡಿಗನವಿಲೆ ಮೊದಲುಜೈನರ ಪವಿತ್ರಕ್ಷೇತ್ರವಾಗಿದ್ದು, ಹಲವಾರು ಕಂತಿಯರು ವಾಸಿಸುತ್ತಿದರು ಎಂದು ತಿಳಿದುಬರುತ್ತದೆ. ಹಾಗೆಯೇ ಕಂತಿಯರು ತೀರ್ಥಕ್ಷೇತ್ರಗಳಲ್ಲಿ ಮುಡುಪುವುದು ಅತ್ಯಂತ ಪವಿತ್ರವೆಂಬ ಭಾವನೆಜೈನಧರ್ಮದಲ್ಲಿತ್ತು. ಅಮೃತಬ್ಬೆ ಕಂತಿಯು ಈ ತೀರ್ಥಕ್ಷೇತ್ರದಲ್ಲಿಯೇ ಮರಣ ಹೊಂದಿದಳು. ಆದರೆ ಅಂದಿನ ತೀರ್ಥಕ್ಷೇತ್ರಇಂದು ಉಳಿದು ಬಂದಿಲ್ಲವೆಂಬುದು ವಿಷಾದನೀಯ.

12ನೇ ಶತಮಾನಕ್ಕೆ ಸೇರಿದ ಕಂಬದಹಳ್ಳಿಯ ಶಾಸನವು ಮೂಲಸಂಘದ ದೇಶಿಯ ಗುಣದ ಪುಸ್ತಕಗಚ್ಛದ ಶ್ರೀ ಪ್ರಭಾಚಂದ್ರ ಸಿದ್ದಾನ್ತಿಕರ ಶಿಷ್ಯೆರಾದ ರುಕುಮವ್ವೆ ಮತ್ತು ಜಕ್ಕವ್ವೆಕಂತಿಯರ ಉಲ್ಲೇಖವಿರುವುದು ಕಂಡುಬರುತ್ತದೆ.

ರುಕುಮವ್ವೆ ಮತ್ತು ಜಕ್ಕವ್ವೆಕಂತಿಯರು ಪ್ರಭಾಚಂದ್ರಸಿದ್ದಾನ್ತಿಕರ ಶಿಷ್ಯೆಯಾಗಿದ್ದರು. ಈ ಕಂತಿಯರು ಉತ್ತಮ ಶಿಕ್ಷಣ ಪಡೆದವಳಾಗಿದ್ದರು ರುಕುಮವ್ವೆ ಮತ್ತು ಜಕ್ಕವ್ವೆಕಂತಿಯರು ಹೊಯ್ಸಳ ದಂಡನಾಯಕ ಬೊಪ್ಪನ ಗುರುಗಳಾಗಿದ್ದರು ಎಂದು ತಿಳಿದು ಬರುತ್ತದೆ. ಕಂತಿಯರು ಪುರುಷಶಿಷ್ಯರನ್ನು ಹೊಂದಿದ್ದ ಅಂಶ ಪ್ರಮುಖವಾದುದು, ಅಲ್ಲದೆ ಕಂಬದಹಳ್ಳಿಯು ಜೈನರ ಪವಿತ್ರತೀರ್ಥಕ್ಷೇತ್ರವಾಗಿರುವುದಲ್ಲದೇ, ಇಲ್ಲಿ ವಿದ್ಯಾಕೇಂದ್ರವು, ಕಂತಿಯರ ಮಠವು ಇದ್ದವು ಎಂಬುದನ್ನು ತಿಳಿಯಬಹುದು.

ಹಿರೇಮರಳಿ ಶಾಸನದಲ್ಲಿ ಮೂಲ ಸಂಘಕ್ಕೆ ಸೇರಿದ ಮಲ್ಲಿಸೇನದೇವರ ಸಧರ್ಮಿಗಳಾದ ಅಯ್ಯಸೇನಕನ್ತಿಯರ ಶಿಷ್ಯೆಯರಾದ ಮೊಲ್ಲೆವೊಸಪೂರ ಬುದ್ದಿಸೇನ ಕಂತಿಯರ ಉಲ್ಲೇಖವಿದೆ. ಈ ಶಾಸನದಲ್ಲಿ ಮಲ್ಲಿಸೇನದೇವರ ಸಮಕಾಲೀನರಾದ ಆಯ್ಯಸೇನನ ಶಿಷ್ಯೆ ಬುದ್ದಿಸೇನೆ ಎಂಬುದನ್ನು ಉಲ್ಲೇಖಿಸುತ್ತದೆ. ಪುರುಷಗುರುವಿನಿಂದ ಶಿಷ್ಯೆ ವಿದ್ಯಾಭ್ಯಾಸ ಪಡೆದಿರುವುದನ್ನು ಕಾಣಬಹುದು.

ಕಳಸ್ತವಾಡಿಯು ಗಂಗರ ಕಾಲದಲ್ಲಿ ಜೈನಧರ್ಮಿಯರ ಬಸದಿಯನ್ನು ಹೊಂದಿದ್ದ ಹಾಗೂ ಪ್ರಮುಖ ವ್ಯಾಪಾರಕೇಂದ್ರವಾಗಿದ್ದ ಸ್ಥಳವಾಗಿತ್ತು. ಈಬಸದಿಗೆ ಕಣ್ಣಬ್ಬೆಕಂತಿಯರು ಕಳಸ್ತವಾಡಿಯ ತೀರ್ಥಕ್ಕೆ, ಬಸದಿಗೆ ಪಂಚಲೋಹದ ಜಿನಬಿಂಬವನ್ನು ಮಾಡಿಸಿಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ. ಕಂತಿಯರು ತೀರ್ಥಂಕರರ ಮೇಲಿನ ಪೂಜ್ಯಭಾವನೆಯಿಂದ ಜಿನಬಿಂಬವನ್ನು ದಾನಮಾಡಿದ ಅಂಶವನ್ನು ಕಾಣಬಹುದು.

11ನೇ ಶತಮಾನಕ್ಕೆ ಸೇರಿದ ಶ್ರವಣಬೆಳಗೊಳದ ಶಾಸನದಲ್ಲಿದೇವರನಂದಿ ಶಿಲಾರಕರ ಗುಡ್ಡಿ ಮಾಳವ್ವೆ ಕಂತಿಯು ಪಂಚಲೋಹದಜಿನಬಿಂಬವನ್ನು ಕಳಸ್ತವಾಡಿಯ ತೀರ್ಥದ ಬಸದಿಗೆ ಕೊಟ್ಟ ವಿಷಯವನ್ನುಉಲ್ಲೇಖಿಸುತ್ತದೆ. ಇಲ್ಲಿಮಾಳವ್ವೆ ದೇವರನಂದಿ ಶಿಲಾರಕರ ಶಿಷ್ಯೆಯಾಗಿದ್ದು, ಕಳಸ್ತವಾಡಿ ತೀರ್ಥಕ್ಕೆದಾನ ನೀಡಿದಅಂಶವನ್ನು ತಿಳಿಯಬಹುದು.

ಮದ್ದೂರುತಾಲ್ಲೂಕು ಮಾರಗಾನಹಳ್ಳಿಯ 12ನೇ ಶತಮಾನಕ್ಕೆ ಸೇರಿದ ಶಾಸನದಲ್ಲಿ ಮಾದೇವಿ ಕನ್ತಿಯ ಹೆಸರುಉಲ್ಲೇಖವಾಗಿದೆ. ಈಮಾದೇವಿ ಕಂತಿಯರುಯಾರ ಶಿಷ್ಯೆಯಾಗಿದ್ದರು ಎಂಬುದು ತಿಳಿದುಬಂದಿಲ್ಲ. ಈ ಮಾದೇವಿ ಕಂತಿ ಜೈನಮಂದಿರ,ಕಂತಿಯರ ಮಠ ಹಾಗೂ ಅತಿಥಿಗೃಹದ ಮುಖ್ಯಾಧಿಕಾರಿಯಾಗಿದ್ದಳುಎಂಬುದು ತಿಳಿದು ಬಂದಿರುತ್ತದೆ. ಮುಖ್ಯಾಧಿಕಾರಿಯಾಗಿ ನೇಮಿಸುತ್ತಿದಅಂಶವನ್ನು ಮತ್ತುಕನ್ತಿಯರು ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸದ ವಿಷಯವನ್ನು ತಿಳಿಯಬಹುದು.

ಮಟ್ಟನಹಳ್ಳಿ ಶಾಸನದಲ್ಲಿ ಕಂತಿ ಬಸಂತಿಕಾದೇವಿಯರು ನೆಲೆಸಿ ಜನೋಪಕಾರಿ ಕಾರ್ಯಗಳಲ್ಲಿ ಮಗ್ನರಾಗಿದ್ದರು ಎಂಬ ವಿಷಯವನ್ನು ಉಲ್ಲೇಖಿಸಿದೆ. ಈ ಶಾಸನವು ತ್ರುಟಿತವಾಗಿರುವುದರಿಂದ ಹೆಚ್ಚಿನ ಮಾಹಿತಿ ಸಂಗ್ರಹವಾಗಿಲ್ಲ. ಈ ಶಾಸನದಿಂದ ಕಂತಿಯರು ಗ್ರಾಮದ ಜನರ ಪುರೋಭಿವೃದ್ಧಿಗೆ ದುಡಿಯುತ್ತಿದ್ದ ಅಂಶವು ಗಮನಾರ್ಹವಾಗಿದೆ. ಆದರೆ ಈ ಶಾಸನವನ್ನು ಅಧ್ಯ ಯನ ಮಾಡಿದಾಗ ಭಾಸಂತಿಕದೇವಿ ಎಂಬ ಹೆಸರನ್ನು ಹೊರತಾಗಿ ರತ್ನಮ್ಮರವರು ದಾಖಲಿಸಿರುವ ಮಾಹಿತಿಯು ಕಂಡುಬರುವುದಿಲ್ಲ. ಆದ್ದರಿಂದ ಅದನ್ನು ಸಂಪೂರ್ಣವಾಗಿ ತಿರಸ್ಕರಿಸಬಹುದಾಗಿದೆ.

ಮಂಡ್ಯಜಿಲ್ಲೆಗೆ ಸಂಬಂಧಿಸಿದಂತೆ, ಕಂತಿಯರ ಬಗ್ಗೆ ಉಲ್ಲೇಖಿಸಿರುವ 8 ಶಾಸನಗಳಲ್ಲಿ ಕಂತಿಯರ ಹೆಸರು ಉಲ್ಲೇಖಗೊಂಡಿರುವುದನ್ನು ಕಾಣಬಹುದು. ಈ ಶಾಸನಗಳಿಂದ ಕಂತಿಯರು ಪುರುಷ ಗುರುಗಳ

ಶಿಷ್ಯೆಯರಾಗಿರುವುದು ಹಾಗೂ ಕಂತಿಯರು ಪುರುಷರಿಗೆ ಗುರುಗಳಾಗಿರುವುದನ್ನು ಕಾಣಬಹುದು. ಕಂತಿಯರು ಮಠ ಮತ್ತು ವಿವಿಧ ಜವಾಬ್ದಾರಿಗಳ ಅಧಿಕಾರಿಗಳಾಗಿಯೂ ಸೇವೆ ಸಲ್ಲಿಸಿರುವುದನ್ನು, ಮುಖ್ಯಸ್ಥರಾಗಿ ನೇಮಕಗೊಂಡು ಕರ್ತವ್ಯ ನಿರ್ವಹಿಸಿರುವುದನ್ನು ಕಾಣಬಹುದು. ಇಬ್ಬರು ಕಂತಿಯರು ಜೈನರ ಪವಿತ್ರ ತೀರ್ಥಕ್ಷೇತ್ರಗಳಲ್ಲಿಯೇ ಮುಡುಪಿರುವುದನ್ನು ಗಮನಿಸಬಹುದು. ಇಬ್ಬರು ಕಂತಿಯರು ತೀರ್ಥದಬಸದಿಗಳಿಗೆ ಪಂಚಲೋಹದ ಜಿನಬಿಂಬಗಳನ್ನು ದಾನವಾಗಿ ನೀಡಿರುವುದನ್ನು ಕಾಣಬಹುದು. ಉಳಿದ ಕಂತಿಯರುತಾವು ವಾಸಮಾಡುತ್ತಿದ್ದ ಸ್ಥಳದಲ್ಲಿಯೆ ಸಮಾಧಿ ಮರಣ ಹೊಂದಿದ ವಿಷಯವು ಉಲ್ಲೇಖಗೊಂಡಿದೆ. ಹಾಗೆಯೇಅವರ ನೆನಪಿಗಾಗಿ ಮಕ್ಕಳು ಶಿಷ್ಯೆಯರು,ಶಿಷ್ಯರು,ಗುರುಗಳು ನಿಸದಿ ಹಾಕಿರುವುದನ್ನು ಕಾಣಬಹದು. ಹೀಗೆ ಕಂತಿಯರು ಜೀವನ ಮಾರ್ಗವನ್ನು ಆಯ್ಕೆ ಮಾಡಿಕೊಂಡು ಮುಕ್ತಿ ಪಡೆದು ಮೋಕ್ಷ ಸಾಧಿಸಿ ಜೀವನದ ಸಾರ್ಥಕತೆಯನ್ನು ಸಾರುತ್ತಿದ್ದರೆಂಬುದನ್ನು ಕಾಣಬಹುದು.

**ಪರಾಮರ್ಶನ ಗ್ರಂಥಗಳು**


1. ಮಿರ್ಜಿಅಣ್ಣರಾಯ– ಜೈನಧರ್ಮ. ಪು.ಸಂ.50
2. ಚಿದಾನಂದ ಮೂರ್ತಿ.ಎಂ– ಕನ್ನಡ ಶಾಸನಗಳ ಸಾಂಸ್ಕೃತಿಕಅಧ್ಯಯನ– ಪು.ಸಂ119
3. ವಸಂತಲಕ್ಷ್ಮಿ– ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು–ಪು.ಸಂ24
4. ರತ್ನಮ್ಮ.ಎಸ್–ಕಂತಿಯರು ಮತ್ತು ಮುಡುಪಿದವರು–ಪು.ಸಂ 16–17
5. ರತ್ನಮ್ಮ.ಎಸ್–ಕಂತಿಯರು ಮತ್ತು ಮುಡುಪಿದವರು–ಪು.ಸಂ. 15
6. ಕಮಲಾ ಹಂಪನಾ–ಭರಣ ಸಂ–5 ಪು.ಸಂ–96.
7. ರಾಮಚಂದ್ರ ಸ್ಯಾದ್ವಾದಿ–ಜೈನಧರ್ಮದದರ್ಪಣ ಪು.ಸಂ245
8. ಶಾ.ಸಂ–07 ನಾಗಮಂಗಲ–ಶಾ.ಸಂ–55 ಪು.ಸಂ–30
9. ಶಾ.ಸಂ–07ನಾಗಮಂಗಲ–ಶಾ.ಸಂ–28 ಪು.ಸಂ–18
10. ಕರ್ನಾಟಕಜೈನ ಶಾಸನಗಳ ಸಂಪುಟ–05 ಪು.ಸಂ–382–83
11. ಶಾ.ಸಂ–02 ಶ್ರವಣ ಬೆಳಗೋಳ ಶಾ.ಸಂ.52 ಪು.ಸಂ–185
12. ಶಾ.ಸಂ–2 ಶ್ರವಣ ಬೆಳಗೋಳ ಶಾ.ಸಂ.520 ಪು.ಸಂ– 185
13. ಶಾ.ಸಂ–07ಮದ್ದೂರು–ಶಾ.ಸಂ–143 ಪು.ಸಂ338
14. ರತ್ನಮ್ಮ.ಎಸ್–ಕಂತಿಯರು ಮತ್ತು ಮುಡುಪಿದವರು–ಪು.ಸಂ47